KAKP410013702020

# ಪ್ರಧಾನ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಗಂಗಾವತಿ

ಉಪಸ್ಥಿತರುಃ **ಶ್ರೀ.ನಾಗೇಶ ಪಾಟೀಲ**
ಬಿ.ಕಾಂ.ಎಲ್.ಎಲ್.ಬಿ.
ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಗಂಗಾವತಿ.

ದಿನಾಂಕಃ 01 ನೇ ಜುಲೈ 2026 ರಂದು ಉಚ್ಚರಿಸಲ್ಪಟ್ಟಿತು

**ಅಪರಾಧಿಕ ಪ್ರಕರಣ ಸಂಖ್ಯೆಃ 787/2020**

**ಫಿರ್ಯಾದಿ:** **1)** ಕರ್ನಾಟಕ ಸರ್ಕಾರ
ಗಂಗಾವತಿ ನಗರ ಪೋಲಿಸ ಠಾಣೆ

**(ಮಾನ್ಯ ಸ.ಸ.ಅ. ರವರ ಮುಖಾಂತರ)**

**ವಿರುದ್ದ**

**ಆರೋಪಿಃ** ಚನ್ನಬಸವ ಜೇಕಿನ ತಂದೆ ಸಿದ್ದನಗೌಡ,
ವಯಃ **42** ವರ್ಷ, ಉಃ ಖಾಸಗಿ ಕೆಲಸ,
ಸಾಃ ಹೇರೂರು, ಹಾಲಿವಸ್ತಿ ಪ್ರಶಾಂತನಗರ
ಗಂಗಾವತಿ, ತಾಃ ಗಂಗಾವತಿ, ಜಿಃ ಕೊಪ್ಪಳ.

| | |
|---|---|
| ಅಪರಾದ ನಡೆದ ದಿನಾಂಕ | **16-03-2020** |
| ಅಪರಾದ ವರದಿಯಾದ ದಿನಾಂಕ | **16-03-2020** |
| ದೋಷಾರೋಪಣಾ ಪಟ್ಟಿ ಸಲ್ಲಿಸಿದ ದಿನಾಂಕಃ | **17-07-2020** |
| ದೋಷಾರೋಪಣಾ ಮಾಡಿದ ದಿನಾಂಕಃ | **20-07-2020** |
| ಸಾಕ್ಷಿ ಪ್ರಾರಂಭವಾದ ದಿನಾಂಕ | **17-06-2026** |
| ತೀರ್ಪಿಗೆ ಕಾಯ್ದಿರಿಸಲಾದ ದಿನಾಂಕಃ | **01-07-2026** |
| ತೀರ್ಪಿನ ದಿನಾಂಕಃ | **01-07-2026** |

| Rank of the accused | Name of the Accused | Date of Arrest | Date of Release on Bail | Offences Charged with | Whether Acquitted or Convicted | Sentence Imposed | Period of Detention Undergone during trial for purpose of Sec.428 of the Cr.PC |
|---|---|---|---|---|---|---|---|
| 01 | Channabasuva Jekin | 16.03.20 | 11-11-2020 | 323, 324, 504, 506 of IPC | Acquitted | -- | -- |

## ತೀರ್ಪು

ಆರೋಪಿತನು ಭಾ.ದಂ.ಸಂ.ಕಲಂ **323, 324, 504, 506** ರಡಿಯಲ್ಲಿ ಅಪರಾಧ ಎಸಗಿದ್ದಾನೆಂದು ಆರೋಪಿಸಿ ಠಾಣಾ ಪ್ರಭಾರಕರು, ಗಂಗಾವತಿ ನಗರ ಪೋಲಿಸ ಠಾಣೆ ಇವರು ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

**2)** ಅಭಿಯೋಜನಾ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆಃ

ಅ) ಆರೋಪಿತನು ಕೊಪ್ಪಳ ವಾಹಿನಿ ಮಾಸ ಪತ್ರಿಕೆಯ ಸಂಪಾದಕನಿದ್ದು, ಫಿರ್ಯಾದಿದಾರರಾದ ಚಾಸಾ-1 ಹಾಗೂ ಚಾಸಾ-4 ಹಾಗೂ ಇತರರು ಮಾನ್ಯ ಬಿ.ಸಿ.ಪಾಟೀಲ್, ಕೃಷಿ ಸಚಿವರನ್ನು ಸನ್ಮಾನಿಸಿದ ಭಾವಚಿತ್ರವನ್ನು ಆರೋಪಿತನು ದಿನಾಂಕಃ 05-03-2020 ರಂದು ಪ್ರಕಟಿಸಿದ ತನ್ನ ಕೊಪ್ಪಳ ವಾಹಿನಿ ಮಾಸ ಪತ್ರಿಕೆಯಲ್ಲಿ ಹಾಕಿ ಅದಕ್ಕೆ ಮರಳು ದಂದೆಕೋರರು ಅಂತಾ ಅವಹೇಳನಕಾರಿಯಾಗಿ ವರದಿಯನ್ನು ಪ್ರಕಟಿಸಿದ್ದಕ್ಕೆ, ಸದರಿ ಪತ್ರಿಕೆಯ ಬಗ್ಗೆ ವಿಚಾರಿಸಲು ಫಿರ್ಯಾದಿದಾರರು ಕೊಪ್ಪಳದಲ್ಲಿರುವ ವಾರ್ತಾ ಇಲಾಖೆಗೆ ಹೋದಾಗ ಚಾಸಾ-8 ರವರು, ಚಾಸಾ-1 ರವರಿಗೆ ಫೋನ್ ಮಾಡಿ ಆರೋಪಿತನನ್ನು ಕರೆದುಕೊಂಡು ಬರುತ್ತೇನೆ ಎಲ್ಲರೂ ಸೇರಿ ಮಾತನಾಡೋಣ ಅಂತಾ ಹೇಳಿದ್ದಕ್ಕೆ, ದಿನಾಂಕಃ 16-03-2020 ರಂದು ರಾತ್ರಿ 8-30 ಗಂಟೆಗೆ ಚಾಸಾ-1 ರವರು, ಚಾಸಾ-4, 5, 6, 9 ಹಾಗಾ 10 ಇವರೊಂದಿಗೆ ವೆಂಕಟೇಶ್ವರ ಕಾಲೋನಿಯಲ್ಲಿರುವಾಗ, ಚಾಸಾ-8 ಈತನು ಆರೋಪಿತನನ್ನು ಕಾರಿನಲ್ಲಿ ಕರೆದುಕೊಂಡು ಬಂದಿದ್ದು, ಫಿರ್ಯಾದಿ ಈತನು ಆರೋಪಿತನಿಗೆ ನಿಮ್ಮ ಕೊಪ್ಪಳ ವಾಹಿನಿ ಮಾಸ ಪತ್ರಿಕೆಯಲ್ಲಿ ನಮ್ಮ ಬಗ್ಗೆ ಏನೇನೋ ಪ್ರಕಟಿಸಿದೆಲ್ಲ ಅಂತಾ ಕೇಳಿದ್ದಕ್ಕೆ, ಆರೋಪಿತನು ಚಾಸಾ-1 ರವರಿಗೆ ಲೇ ಸೂಳೇಮಗನೆ

ನೀನು ನನ್ನ ಪೇಪರ್ ಬಗ್ಗೆ ವಿಚಾರ ಮಾಡಲು ಕೊಪ್ಪಳಕ್ಕೆ ಹೋಗಿದ್ದೀಯಾ ಮಗನೆ ಇವತ್ತು ನಿನಗೆ ಇಲ್ಲಿಯೇ ಮುಗಸಿಬಿಡ್ತೀನಿ ಯಾವ ಸೂಳೇ ಮಗ ಬಂದು ನಿನಗೆ ಬಿಡ್ಸಿಕೊಳ್ತಾನೆ ನೋಡಿಕೊಳ್ತಿನಿ ಅಂತಾ ಅನ್ನುತ್ತಾ ಏಕಾಏಕಿಯಾಗಿ ಕೈಯಿಂದ ಬಡಿದು, ಕಾಲಿನಿಂದ ಒದ್ದು, ಅಲ್ಲಿಯೇ ಬಿದ್ದಿದ್ದ ಒಂದು ಕಟ್ಟಿಗೆಯಿಂದ ಮೈ, ಕೈಗೆ ಬಡಿದಿದ್ದು, ಅಲ್ಲದೇ ಚಾಸಾ-1 ರವರ ಸ್ನೇಹಿತರಿಗೂ ಲೇ ಸೂಳಿಮಕ್ಕಳ ನೀವೆಲ್ಲರೂ ಕಳ್ಳರಿದ್ದೀರಿ ನಕಲಿ ಪರ್ಮೀಟ್ ಮಾಡ್ತೀರಿ, ಮರಳು ದಂದೆಕೋರರಿದ್ದೀರಿ, ನಿಮಗೆಲ್ಲಾ ಒಂದು ಗತಿ ಕಾಣಿಸುತ್ತೇನೆ, ನಿಮ್ಮನ್ನು ಇಲ್ಲಿಯೇ ಮುಗಿಸಿಬಿಡ್ತೀನಿ ಅಂತಾ ಅವಾಚ್ಯವಾಗಿ ಬೈದಾಡುತ್ತಾ ಜೀವದ ಬೆದರಿಕೆ ಹಾಕಿ ಅವರಿಗೂ ಸಹ ಕೈಯಿಂದ ಹಲ್ಲೆ ಮಾಡಿದ್ದು ಇರುತ್ತದೆ.

ಆ) ಸದರಿ ಪಿರ್ಯಾದಿಯ ಸಾರಾಂಶದ ಮೇಲೆ ಭಾ.ದಂ.ಸಂ. ಕಲಂ 323, 324, 504, 506 ರಡಿಯಲ್ಲಿ ಪ್ರಕರಣ ದಾಖಲಿಸಿ, ತನಿಖೆಯ ನಂತರ ತನಿಖಾಧಿಕಾರಿಗಳು ದೋಷಾರೋಪಣೆ ಪತ್ರ ಸಲ್ಲಿಸಿರುತ್ತಾರೆ.

**3)** ದೋಷಾರೋಪಣಾ ಪತ್ರ ಸಲ್ಲಿಸಿದ ನಂತರ ಅದನ್ನು ಪರಿಶೀಲಿಸಿ ಅಪರಾಧದ ಸಂಜ್ಞೆಯನ್ನು ತೆಗೆದುಕೊಂಡು ಆರೋಪಿತನ ವಿರುದ್ದ ಪ್ರಕರಣ ದಾಖಲಿಸಿಕೊಂಡು**,** ಸಮನ್ಸ ನೀಡಲಾಗಿರುತ್ತದೆ**.** ಆರೋಪಿತನು ಮಾನ್ಯ ನ್ಯಾಯಾಲಯದಿಂದ ಹೊರಡಿಸಿದ ಸಮನ್ಸಗೆ ಉತ್ತರವಾಗಿ ನ್ಯಾಯಾಲಯದ ಮುಂದೆ ಹಾಜರಾಗಿ ಜಾಮೀನು ಪಡೆದಿರುತ್ತಾನೆ**.** ನಂತರ ಆರೋಪಿತನಿಗೆ ದಂಡ ಪ್ರಕ್ರಿಯಾ ಸಂಹಿತೆ **1973** ರ ಕಲಂ **207** ರಲ್ಲಿ ತಿಳಿಸಿರುವಂತೆ ದೋಷಾರೋಪಣೆ ಪತ್ರದ ನಕಲುಗಳನ್ನು ಪೂರೈಸಲಾಗಿರುತ್ತದೆ**.**

**4)** ತದನಂತರ ಆರೋಪಿತನ ಪರ ಹಾಗೂ ಅಭಿಯೋಜನೆಯವರ ವಾದವನ್ನು ಕೇಳಿ ಆರೋಪಿತನ ವಿರುದ್ದ ದೋಷಾರೋಪಣೆ ರಚಿಸಿ**,** ಆರೋಪಿತನಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿದಾಗ**,** ಅದನ್ನು ತಿಳಿದುಕೊಂಡು ಆರೋಪಿತನು ತಾನು ಅಪರಾಧ ಮಾಡಿಲ್ಲಾ ವಿಚಾರಣೆಯಾಗಬೇಕು ಎಂದು ಕೇಳಿಕೊಂಡಿರುತ್ತಾನೆ**.**

**5)** ಆರೋಪಿತನ ಮೇಲಿನ ದೋಷಾರೋಪಣೆಯನ್ನು ರುಜುವಾತು ಪಡಿಸಲು ಅಭಿಯೋಜನೆಯವರು ಚಾಸಾ**-1** ಫಿರ್ಯಾದಿ ಇವರನ್ನು ಪ್ರಾಸಾ**-1** ಅಂತಾ ಹಾಗೂ ಚಾಸಾ**-4** ರಿಂದ **6** ಪ್ರತ್ಯಕ್ಷ ಸಾಕ್ಷಿದಾರರು ಇವರನ್ನು ಪ್ರಾಸಾ**-2** ರಿಂದ **4** ಅಂತಾ

ವಿಚಾರಣೆಗೆ ಒಳಪಡಿಸಿರುತ್ತಾರೆ. ಅವರು ತಮ್ಮ ಪ್ರಕರಣಕ್ಕೆ ವಿರುದ್ದವಾಗಿ ಸಾಕ್ಷಿ ನುಡಿದು ಆರೋಪಿತನು ಕೃತ್ಯವನ್ನು ಅಲ್ಲಗೆಳೆದಿರುತ್ತಾನೆ. ಆದ್ದರಿಂದ ದೋಷಾರೋಪಣೆ ಪತ್ರದ ಇತರೇ ಸಾಕ್ಷಿಗಳಿಗೆ ಸಮನ್ಸ ನೀಡುವಂತೆ ಮಾನ್ಯ ಸ.ಸ.ಅ.ರವರು ಮಾಡಿದ ಮನವಿಯನ್ನು ತೀರಸ್ಕರಿಸಲಾಗಿರುತ್ತದೆ. ಅಭಿಯೋಜನೆಯ ಸಾಕ್ಷಿಗಳಲ್ಲಿ ಆರೋಪಿತನ ವಿರುದ್ದ ಯಾವುದೇ ಸಾಕ್ಷ್ಯಾಧಾರಗಳು ಕಂಡು ಬಾರದ ಕಾರಣ, ದಂಡ ಪ್ರಕ್ರಿಯಾ ಸಂಹಿತೆಯ ಕಲಂ **313** ರಡಿಯಲ್ಲಿ ಪಡೆಯಬೇಕಾದ ಆರೋಪಿತನ ಹೇಳಿಕೆಯನ್ನು ವಿನಾಯತಿಗೊಳಿಸಲಾಗಿರುತ್ತದೆ.

**6)** ಆರೋಪಿತನ ಹಾಗೂ ಅಭಿಯೋಜನೆ ಪರ ವಾದವನ್ನು ಕೇಳಲಾಗಿರುತ್ತದೆ. ಮಾನ್ಯ ನ್ಯಾಯಾಲಯದ ಮುಂದೆ ಇರುವ ಕಡತ ಪರಿಶೀಲಿಸಲಾಗಿರುತ್ತದೆ.

**7)** ಈಗ ಮಾನ್ಯ ನ್ಯಾಯಾಲಯವು ನಿರ್ಧರಿಸಲ್ಪಡುವ ಅಂಶಗಳೆಂದರೆ,

**ಅಂಶಗಳು**

**1)** ಆರೋಪಿತನು ಕೊಪ್ಪಳ ವಾಹಿನಿ ಮಾಸ ಪತ್ರಿಕೆಯ ಸಂಪಾದಕನಿದ್ದು, ಫಿರ್ಯಾದಿದಾರರಾದ ಚಾಸಾ-1 ಹಾಗೂ ಚಾಸಾ-4 ಹಾಗೂ ಇತರರು ಮಾನ್ಯ ಬಿ.ಸಿ.ಪಾಟೀಲ್, ಕೃಷಿ ಸಚಿವರನ್ನು ಸನ್ಮಾನಿಸಿದ ಭಾವಚಿತ್ರವನ್ನು ಆರೋಪಿತನು ದಿನಾಂಕಃ 05-03-2020 ರಂದು ಪ್ರಕಟಿಸಿದ ತನ್ನ ಕೊಪ್ಪಳ ವಾಹಿನಿ ಮಾಸ ಪತ್ರಿಕೆಯಲ್ಲಿ ಹಾಕಿ ಅದಕ್ಕೆ ಮರಳು ದಂದೆಕೋರರು ಅಂತಾ ಅವಹೇಳನಕಾರಿಯಾಗಿ ವರದಿಯನ್ನು ಪ್ರಕಟಿಸಿದ್ದಕ್ಕೆ, ಸದರಿ ಪತ್ರಿಕೆಯ ಬಗ್ಗೆ ವಿಚಾರಿಸಲು ಫಿರ್ಯಾದಿದಾರರು ಕೊಪ್ಪಳದಲ್ಲಿರುವ ವಾರ್ತಾ ಇಲಾಖೆಗೆ ಹೋದಾಗ ಚಾಸಾ-8 ರವರು, ಚಾಸಾ-1 ರವರಿಗೆ ಫೋನ್ ಮಾಡಿ ಆರೋಪಿತನನ್ನು ಕರೆದುಕೊಂಡು ಬರುತ್ತೇನೆ ಎಲ್ಲರೂ ಸೇರಿ ಮಾತನಾಡೋಣ ಅಂತಾ ಹೇಳಿದ್ದಕ್ಕೆ, ದಿನಾಂಕಃ 16-03-2020 ರಂದು ರಾತ್ರಿ 8-30 ಗಂಟೆಗೆ ಚಾಸಾ-1 ರವರು, ಚಾಸಾ-4, 5, 6, 9 ಹಾಗಾ 10 ಇವರೊಂದಿಗೆ ವೆಂಕಟೇಶ್ವರ ಕಾಲೋನಿಯಲ್ಲಿರುವಾಗ, ಚಾಸಾ-8 ಈತನು ಆರೋಪಿತನನ್ನು ಕಾರಿನಲ್ಲಿ ಕರೆದುಕೊಂಡು ಬಂದಿದ್ದು, ಫಿರ್ಯಾದಿ ಈತನು ಆರೋಪಿತನಿಗೆ ನಿಮ್ಮ ಕೊಪ್ಪಳ ವಾಹಿನಿ ಮಾಸ ಪತ್ರಿಕೆಯಲ್ಲಿ ನಮ್ಮ ಬಗ್ಗೆ ಏನೇನೋ ಪ್ರಕಟಿಸಿದೆಲ್ಲ ಅಂತಾ ಕೇಳಿದ್ದಕ್ಕೆ, ಆರೋಪಿತನು ಚಾಸಾ-1 ರವರಿಗೆ ಲೇ ಸೂಳೇಮಗನೆ ನೀನು ನನ್ನ ಪೇಪರ್ ಬಗ್ಗೆ ವಿಚಾರ ಮಾಡಲು ಕೊಪ್ಪಳಕ್ಕೆ ಹೋಗಿದ್ದೀಯಾ ಮಗನೆ ಇವತ್ತು ನಿನಗೆ ಇಲ್ಲಿಯೇ ಮುಗಸಿಬಿಡ್ತೀನಿ ಯಾವ ಸೂಳೇ ಮಗ ಬಂದು ನಿನಗೆ ಬಿಡ್ಸಿಕೊಳ್ತಾನೆ ನೋಡಿಕೊಳ್ತಿನಿ ಅಂತಾ ಅನ್ನುತ್ತಾ ಏಕಾಏಕಿಯಾಗಿ

ಕೈಯಿಂದ ಬಡಿದು, ಕಾಲಿನಿಂದ ಒದ್ದು, ಅಲ್ಲಿಯೇ ಬಿದ್ದಿದ್ದ ಒಂದು ಕಟ್ಟಿಗೆಯಿಂದ ಮೈ, ಕೈಗೆ ಬಡಿದಿದ್ದು, ಅಲ್ಲದೇ ಚಾಸಾ-1 ರವರ ಸ್ನೇಹಿತರಿಗೂ ಲೇ ಸೂಳಿಮಕ್ಕಳ ನೀವೆಲ್ಲರೂ ಕಳ್ಳರಿದ್ದೀರಿ ನಕಲಿ ಪರ್ಮಿಟ್ ಮಾಡ್ತೀರಿ, ಮರಳು ದಂದೆಕೋರರಿದ್ದೀರಿ, ನಿಮಗೆಲ್ಲಾ ಒಂದು ಗತಿ ಕಾಣಿಸುತ್ತೇನೆ, ನಿಮ್ಮನ್ನು ಇಲ್ಲಿಯೇ ಮುಗಿಸಿಬಿಡ್ತೀನಿ ಅಂತಾ ಅವಾಚ್ಯವಾಗಿ ಬೈದಾಡುತ್ತಾ ಜೀವದ ಬೆದರಿಕೆ ಹಾಕಿ ಅವರಿಗೂ ಸಹ ಕೈಯಿಂದ ಹಲ್ಲೆ ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ **323, 324, 504, 506** ಅಡಿಯಲ್ಲಿ ದಂಡನೀಯ ಅಪರಾಧವನ್ನು ಎಸಗಿದ್ದಾನೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಭೀತುಪಡಿಸಿದ್ದಾರೆಯೆ**?**

**2)** ಹಾಗಾದರೇ ಆದೇಶ**/**ಶಿಕ್ಷೆ ಏನು**?**

**8)** ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತಿದೆ.

ಅಂಶ ಸಂಖ್ಯೆ-1 **:** ನಕಾರಾತ್ಮಕವಾಗಿ

ಅಂಶ ಸಂಖ್ಯೆ-2 **:** ಅಂತಿಮ ಆದೇಶದಂತೆ ಈ ಕೆಳಗೆ ಚರ್ಚಿಸಿದ ಕಾರಣಗಳಿಗಾಗಿ**;**

## <u>ಕಾ ರ ಣ ಗ ಳು</u>

**9)** <u>**ಅಂಶ ಸಂಖ್ಯೆ-1**</u> ಃ ಪ್ರಾಸಾ-1 ರಿಂದ 4 ರವರು ತಮ್ಮ ಕೇಸಿಗೆ ವಿರುದ್ದವಾಗಿ ಸಾಕ್ಷಿ ನುಡಿದಿದ್ದರೂ, ಮಾನ್ಯ ಸ.ಸ.ಅ.ರವರು ಅಭಿಯೋಜನೆಯ ದಾಖಲಾತಿಗಳ ಮೇಲೆ ಅವಲಂಬಿತರಾಗಿ, ಅಭಿಯೋಜನೆಯು ಆರೋಪಿತನ ಅಪರಾಧವನ್ನು ಸಾಭೀತುಪಡಿಸಿದ್ದು ಕಾನೂನಿನ ಪ್ರಕಾರ ಶಿಕ್ಷಿಸಲು ವಾದ ಮಂಡಿಸಿರುತ್ತಾರೆ.

**10)** ಪ್ರತಿಯಾಗಿ ಆರೋಪಿತನ ಪರ ಮಾನ್ಯ ವಕೀಲರು, ಪ್ರಮುಖ ಸಾಕ್ಷಿದಾರರಾದ ಪಿರ್ಯಾದಿ ಸಾಕ್ಷಿದಾರರು ಯಾವುದೇ ಸಾಕ್ಷ್ಯ ನುಡಿದಿರುವುದಿಲ್ಲ ಹಾಗೂ ಅಭಿಯೋಜನೆಯು ಆರೋಪಿತನ ಅಪರಾಧವನ್ನು ನಿಸ್ಸಂದೇಹವಾಗಿ ರುಜುವಾತುಪಡಿಸಿರುವುದಿಲ್ಲ. ಆದ್ದರಿಂದ ಬಿಡುಗಡೆ ಮಾಡಲು ವಾದ ಮಂಡಿಸಿರುತ್ತಾರೆ.

**11)** ಎರಡು ಕಡೆಯ ವಾದವನ್ನು ಆಲಿಸಿದ ನಂತರ ಕಡತವನ್ನು ಪರಿಶಿಲಿಸಲಾಗಿ, ಅಭಿಯೋಜನೆಯವರು ಸದರಿ ಪ್ರಕರಣವನ್ನು ಸಾಭೀತುಪಡಿಸಲು ಈ ಪ್ರಕರಣದಲ್ಲಿಯ

ಪಿರ್ಯಾದಿದಾರನನ್ನು ಪ್ರಾಸಾ-1 ಅಂತಾ ಹಾಗೂ ಪ್ರತ್ಯಕ್ಷ ಸಾಕ್ಷಿದಾರರನ್ನು ಪ್ರಾಸಾ-2 ರಿಂದ 4 ಅಂತಾ ವಿಚಾರಣೆಗೊಳಪಡಿಸಿಕೊಂಡು ನಿಶಾನೆ ಪಿ-1 ರಿಂದ 4 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ.

**12)** ಪ್ರಾಸಾ-1 ಫಿರ್ಯಾದಿ ಸಾಕ್ಷಿದಾರರಾದ ಬಸನಗೌಡ ಇವರು ತಮ್ಮ ಸಾಕ್ಷ್ಯದಲ್ಲಿ ಚಾಸಾ-2 ರಿಂದ 10 ಹಾಗೂ ಆರೋಪಿ ಗೊತ್ತು, ಆರೋಪಿ ತನ್ನ ಜೊತೆ ತಂಟೆ ಮಾಡಿಲ್ಲ, ತನಗೆ ಹೊಡಿ ಬಡಿ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ ಹಾಗೂ ಕೊಲೆ ಬೆದರಿಕೆ ಹಾಕಿರುವುದಿಲ್ಲ, ಈಗ ಆರು ವರ್ಷಗಳ ತನ್ನ ಮತ್ತು ಆರೋಪಿತನ ನಡುವೆ ವೈಮನಸ್ಸು ಉಂಟಾಗಿದ್ದರಿಂದ ತಾನು ಪೋಲಿಸ ಠಾಣೆಗೆ ಹೋದಾಗ ಪೋಲಿಸರು ತನ್ನಿಂದ ಒಂದು ದಾಖಲೆಗೆ ಸಹಿ ಪಡೆದುಕೊಂಡಿರುತ್ತಾರೆ, ಸದರಿ ದಾಖೆಯಲ್ಲಿ ಬರೆದಿರುವ ವಿಚಾರ ತನಗೆ ಗೊತ್ತಿಲ್ಲ, ತಾನು ಪೋಲಿಸರಿಗೆ ಯಾವುದೇ ಘಟನಾ ಸ್ಥಳ ತೋರಿಸಿಲ್ಲ, ಪೋಲಿಸರು ಯಾವುದೇ ವಸ್ತುವನ್ನು ಜಪ್ತುಪಡಿಸಿಕೊಂಡಿರುವುದಿಲ್ಲ, ತಾನು ಘಟನೆ ಹಿನ್ನಲೆಯಲ್ಲಿ ಯಾವುದೇ ಚಿಕಿತ್ಸೆ ಪಡೆದುಕೊಂಡಿಲ್ಲ ಎಂದು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ.

**13)** ಪ್ರಾಸಾ-2 ರಿಂದ 4 ಪ್ರತ್ಯಕ್ಷ ಸಾಕ್ಷಿದಾರರು ತಮ್ಮ ಸಾಕ್ಷ್ಯದಲ್ಲಿ ತಮಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ, ಆರೋಪಿತನು ತಮ್ಮ ಮತ್ತು ಚಾಸಾ-1 ರವರ ಜೊತೆ ತಂಟೆ ಮಾಡಿ ಹಲ್ಲೆ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ ಹಾಗೂ ಕೊಲೆ ಬೆದರಿಕೆ ಹಾಕಿಲ್ಲ, ತಾವು ಘಟನೆ ಹಿನ್ನಲೆಯಲ್ಲಿ ಯಾವುದೇ ಚಿಕಿತ್ಸೆ ಪಡೆದುಕೊಂಡಿರುವುದಿಲ್ಲ, ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ.

**14)** ಅಭಿಯೋಜನೆಯವರು ಪ್ರಾಸಾ-1 ರಿಂದ 4 ರವರನ್ನು ಪ್ರತಿಕೂಲ ಸಾಕ್ಷಿಗಳು ಎಂದು ಪರಿಗಣಿಸಿ ಮಾನ್ಯ ಸ.ಸ.ಅ.ರವರು ಪಾಟೀ ಸವಾಲು ಮಾಡಿದ್ದರೂ ಸಹಿತ ಆರೋಪಿತನ ವಿರುದ್ದ ಯಾವುದೇ ಸಾಕ್ಷ್ಯವನ್ನು ಅಂದರೆ ಹೇಳಿಕೆಗಳನ್ನು ಅವರ ಪಾಟೀ ಸವಾಲಿನಲ್ಲಿ ಪಡೆದಿರುವುದಿಲ್ಲ. ಅಭಿಯೋಜನಾ ಪ್ರಾಸಾ-1 ರವರು ಪಿರ್ಯಾದಿ ಸಾಕ್ಷಿದಾರರು ಹಾಗೂ ಪ್ರಾಸಾ**-2** ರಿಂದ **4** ರವರು ಪ್ರತ್ಯಕ್ಷ ಸಾಕ್ಷಿದಾರರು ತಮ್ಮ ಪ್ರಕರಣಕ್ಕೆ ವಿರುದ್ದವಾಗಿ ಸಾಕ್ಷಿ ನುಡಿದಿದ್ದು ಆರೋಪಿತನ ಕೃತ್ಯವನ್ನು ಅಲ್ಲಗೆಳೆದಿರುತ್ತಾರೆ**.** ಆದ್ದರಿಂದ

ದೋಷಾರೋಪಣೆ ಪತ್ರದ ಇತರೇ ಸಾಕ್ಷಿಗಳಿಗೆ ಸಮನ್ಸ ನೀಡುವಂತೆ ಮಾನ್ಯ ಸ.ಸ.ಅ.ರವರು ಮಾಡಿದ ಮನವಿಯನ್ನು ತೀರಸ್ಕರಿಸಲಾಗಿರುತ್ತದೆ. ಒಂದು ವೇಳೆ ಸಮನ್ಸ ನೀಡಿದ್ದರೂ ಸಹ, ಮಾನ್ಯ ನ್ಯಾಯಾಲಯದ ಮತ್ತು ಅಧಿಕಾರಿಗಳ ಅಮೂಲ್ಯ ಸಮಯ ಮತ್ತು ರಾಜ್ಯದ ಹಣ ಪೋಲಾಗುವುದು ಹೊರತುಪಡಿಸಿ, ಅಭಿಯೋಜನೆಗೆ ಯಾವುದೇ ಪೂರಕ ಅಂಶಗಳು ಇದ್ದಿರುವುದಿಲ್ಲ.

**15)** ಅಭಿಯೋಜನಾ ಸಾಕ್ಷಿ-1 ಪಿರ್ಯಾದಿ ಹಾಗೂ ಸಾಕ್ಷಿ**-2** ರಿಂದ **4** ಪ್ರತ್ಯಕ್ಷ ಸಾಕ್ಷಿದಾರರು ಇದ್ದು. ಆದರೆ ಅವರು ನುಡಿದಿರುವಂತಹ ಸಾಕ್ಷ್ಯ ಹಾಗೂ ಕಡತದಲ್ಲಿರುವಂತಹ ದಾಖಲಾತಿಗಳು ಒಂದಕ್ಕೊಂದು ತದ್ವಿರುದ್ದವಾಗಿರುತ್ತವೆ. ಪ್ರಕರಣವನ್ನು ಗಮನಿಸಿದಾಗ ರಾಜಿಯಾಗಿದ್ದು ಕಂಡು ಬರುತ್ತದೆ. ಸದರಿ ರಾಜಿಯಲ್ಲಿ ನ್ಯಾಯಾಲಯವು ಮದ್ಯ ಪ್ರವೇಶಿಸುವುದು ಕಾನೂನಿನ ದೃಷ್ಠಿಯಿಂದ ಸಮಂಜಸ ಇರುವುದಿಲ್ಲ. ಆದ್ದರಿಂದ ಅಭಿಯೋಜನೆಯು ಆರೋಪಿತನ ಮೇಲಿನ ಅಪರಾಧವನ್ನು ಸಂಶಯಾತೀತವಾಗಿ ರುಜುವಾತುಪಡಿಸುವಲ್ಲಿ ವಿಫಲವಾಗಿದೆ ಅಂತಾ ಪರಿಗಣಿಸಿ, ಆರೋಪಿತನಿಗೆ ಸಂಶಯದ ಲಾಭವನ್ನು ನೀಡಿ ಅಂಶ ಸಂಖ್ಯೆ-1 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

**15)** **<u>ಅಂಶ ಸಂಖ್ಯೆ 2 :</u>** ಅಭಿಯೋಜನೆಯು ಆರೋಪಿತನ ಮೇಲಿನ ಅಪರಾಧವನ್ನು ಸಂಶಯಾತೀತವಾಗಿ ರುಜುವಾತುಪಡಿಸುವಲ್ಲಿ ವಿಫಲವಾಗಿದ್ದರಿಂದ ದೋಷಾರೋಪಣೆಗಳಿಂದ ಆರೋಪಿತನು ಬಿಡುಗಡೆಗೆ ಅರ್ಹನಿರುತ್ತಾನೆ ಅಂತಾ ಅಭಿಪ್ರಾಯಪಟ್ಟು, ಅಂಶ ಸಂಖ್ಯೆ**-1** ರಲ್ಲಿ ತೋರಿಸಿದ ಕಾರಣಗಳಿಂದಾಗಿ, ಈ ಕೆಳಗಿನಂತೆ ಅಂತಿಮ ಆದೇಶ ಮಾಡಲಾಗಿದೆ.

## <u>ಆದೇಶ</u>

ದಂಡ ಪ್ರಕ್ರಿಯಾ ಸಂಹಿತೆ ಕಲಂ **248(1)** ರಡಿಯಲ್ಲಿ ಪ್ರದತ್ತವಾದ ಅಧಿಕಾರದ ಮೇರೆಗೆ ಆರೋಪಿತನನ್ನು ಭಾರತೀಯ ದಂಡ ಸಂಹಿತೆ ಕಲಂ**. 323, 324, 504, 506** ರಡಿಯಲ್ಲಿ ಶಿಕ್ಷಿಸಲ್ಪಡುವ ದೋಷಾರೋಪಣೆಗಳಿಗೆ ನಿರ್ದೋಷಿ ಎಂದು ತೀರ್ಮಾನಿಸಿ ದೋಷಮುಕ್ತಗೊಳಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿತನು ನೀಡಿದ ಜಾಮೀನು ಪತ್ರ ರದ್ದಾಗತಕ್ಕದ್ದು. ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡಿರುವ ಒಂದು ಕಟ್ಟಿಗೆ ಬೆಲೆ ಬಾಳದ ವಸ್ತುವಾಗಿರುವುದರಿಂದ ಅಫೀಲು ಅವಧಿ ಮುಕ್ತಾಯದ ನಂತರ ನಾಶಪಡಿಸಲು ಕಛೇರಿಗೆ ನಿರ್ದೇಶಿಸಲಾಗಿದೆ.

(ಮೇಲಿನ ತೀರ್ಪನ್ನು ಶೀಘ್ರಲಿಪಿಗಾರಳಿಗೆ ಗಣಕಯಂತ್ರದ ಮೇಲೆ ನೇರವಾಗಿ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ತಿದ್ದುಪಡಿ ಮಾಡಿ ಈ ದಿನ ದಿನಾಂಕಃ **01** ನೇ ಜುಲೈ **2026** ರಂದು ತೆರೆದ ನ್ಯಾಯಾಲಯದಲ್ಲಿ ಉಚ್ಚರಿಸಲ್ಪಟ್ಟಿತ್ತು.)

(ನಾಗೇಶ ಪಾಟೀಲ)
ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ.ಗಂಗಾವತಿ

## ::ಅನುಬಂಧ::

**ಅಭಿಯೋಜನೆ/ಆರೋಪಿ ಪರವಾಗಿ ವಿಚಾರಿಸಿಕೊಂಡ ಸಾಕ್ಷಿದಾರರ ವಿವರ**

**1)** ಅಭಿಯೋಜನೆ ಪರವಾಗಿ ವಿಚಾರಿಸಿಕೊಂಡ ಸಾಕ್ಷಿದಾರರ ವಿವರ

| | | |
|---|---|---|
| ಅಸಾ-**1 :** | ಬಸನಗೌಡ ತಂದೆ ಮಲ್ಲನಗೌಡ | ಫಿರ್ಯಾದಿ |
| ಅಸಾ-**2 :** | ಹಯ್ಯತ್ ಪೀರ ತಂದೆ ಶೇಕ್ಷಾವಲಿ | ಪ್ರತ್ಯಕ್ಷ್ಯ ಸಾಕ್ಷಿದಾರ |
| ಅಸಾ-**3 :** | ಉಮೇಶ ತಂದೆ ಹನುಮಂತಪ್ಪ | ಪ್ರತ್ಯಕ್ಷ್ಯ ಸಾಕ್ಷಿದಾರ |
| ಅಸಾ-**4 :** | ನಾಗರಾಜ ತಂದೆ ದೊಡ್ಡಬಸಪ್ಪ | ಪ್ರತ್ಯಕ್ಷ್ಯ ಸಾಕ್ಷಿದಾರ |

**2)** ಆರೋಪಿ ಪರವಾಗಿ ವಿಚಾರಿಸಿಕೊಂಡ ಸಾಕ್ಷಿದಾರರ ವಿವರ

ಇಲ್ಲಾ

**3)** ನ್ಯಾಯಾಲಯದ ಪರವಾಗಿ ವಿಚಾರಿಸಿಕೊಂಡ ಸಾಕ್ಷಿದಾರರ ವಿವರ

ಇಲ್ಲಾ

**<u>ಅಭಿಯೋಜನೆ/ಆರೋಪಿತನ ಪರವಾಗಿ ಗುರುತಿಸಿದ ದಾಖಲಾತಿಗಳ ವಿವರ</u>**

**1)** <u>ಅಭಿಯೋಜನೆ ಪರವಾಗಿ ಗುರುತಿಸಿದ ದಾಖಲಾತಿಗಳ ವಿವರ</u>

| | | |
|---|---|---|
| 1. | ನಿಶಾನೆ ಪಿ-**1** | ಫಿರ್ಯಾದಿ |
| 2. | ನಿಶಾನೆ ಪಿ-**2** | ಪ್ರಾಸಾ-**2** ರವರ ಹೇಳಿಕೆ |
| 3. | ನಿಶಾನೆ ಪಿ-**3** | ಪ್ರಾಸಾ-**3** ರವರ ಹೇಳಿಕೆ |
| 4. | ನಿಶಾನೆ ಪಿ-**4** | ಪ್ರಾಸಾ-4 ರವರ ಹೇಳಿಕೆ |

**2)** <u>ಆರೋಪಿತನ ಪರವಾಗಿ ಗುರುತಿಸಿಕೊಂಡ ದಾಖಲೆಗಳ ವಿವರ</u>

ಇಲ್ಲಾ

**3)** <u>ನ್ಯಾಯಾಲಯದ ಪರವಾಗಿ ಗುರುತಿಸಿಕೊಂಡ ದಾಖಲೆಗಳ ವಿವರ</u>

ಇಲ್ಲಾ

**4)** <u>ಮುದ್ದೆಮಾಲಿನ/ಜಪ್ತಾದ ವಸ್ತುಗಳ ಬಗ್ಗೆ ವಿವರ</u>

ಇಲ್ಲಾ

**(**ನಾಗೇಶ ಪಾಟೀಲ**)**
ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ**.**ದ**.**ನ್ಯಾ**.**ದಂ**.**ಗಂಗಾವತಿ